ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬೇರೆ ಕಡೆ ರೆವಿನ್ಯೂ ಜಾಗದಲ್ಲಿ ಮನೆಗಳನ್ನು ಕಟ್ಟಿ ಕೊಂಡಿರುವಂತಹವರಿಗೆ ರೆಗ್ಯುಲರೈಸ್ ಮಾಡುತ್ತಿಲ್ಲವೇ? ಆದರೆ ಈ ಬಡ ಜನ ಏನು ಮಾಡಿದ್ದಾರೆ? ಕಳೆದ ೧೨ ವರ್ಷಗಳಿಂದಲೂ ಅಲ್ಲೇ ವಾಸವಾಗಿದ್ದಂತಹವರನ್ನು ವಿಕ್ಟೋರಿಯಾ ರಾತ್ರೋರಾತ್ರಿ ಬುಲ್ಡೋಜರ್ ತಂದು ಮನೆಗಳನ್ನು ಹೊಡೆಸಿ ಹಾಕಿ ಈಗ ಅವರಿಗೆ ಮನೆ ಮಠ ಇಲ್ಲದಂತೆ ಮಾಡುವುದು ಧರ್ಮ ಅಲ್ಲ. ಆ ಜಾಗದಲ್ಲೇ ಅವರಿಗೆ ನಿವೇಶನಗಳನ್ನು ಕೊಟ್ಟರೆ ಆಗುವಂತಹ ನಷ್ಟವೇನು? ಎಷ್ಟೋ ಕಡೆ ರೆಗ್ಯುಲರೈಸ್ ಮಾಡಿಲ್ಲವೇ. ಬಸವನಗುಡಿಯಲ್ಲಿ ರಸ್ತೆಯಲ್ಲೇ ಮನೆಗಳನ್ನು ಕಟ್ಟಿ ಕೊಂಡಿದ್ದಾರೆ, ಅವರಿಗೆ ಏನು ಮಾಡಿಯೇ ಇಲ್ಲ. ಆದರೆ ಇವರು ಕಳೆದ ೧೨ ವರ್ಷಗಳಿಂದಲೂ ಅಲ್ಲೇ ಇದ್ದಾರೆ. ಅದು ಸರ್ಕಾರಿ ಜಾಗ, ಅಲ್ಲೇ ಬಡಾವಣೆಯನ್ನು ಮಾಡಿ, ಇವರಿಗೆ ನಿವೇಶನಗಳನ್ನು ಅಲ್ಲೇ ಕೊಟ್ಟರೆ ಆಗುವ ನಷ್ಟವೇನು?

ಶ್ರೀ ಎ. ಲಕ್ಷ್ಮೀಸಾಗರ್.—ನಷ್ಟದ ಪ್ರಶ್ನೆ ಅಲ್ಲ. Regularisation of all unauthorised layouts where they have not been removed, they are being considered by the Government. ಎಲ್ಲಾ ತೆಗೆದುಹಾಕಿಬಿಟ್ಟಿದ್ದಾರೆ. ಬೋನೋಫೈಡ್ ಸೈಟ್‌ಲೆಸ್ ಪೀಪಲ್ ಇದ್ದರೆ ಕಡಿಮೆ ಬೆಲೆಗೆ ಕೊಡತಕ್ಕ, ವೀಕರ್ ಸೆಕ್ಷನ್ಸ್‌ಗೆ, ಫೈನಾನ್ಸಿಯಲ್ ವೀಕರ್ ಸೆಕ್ಷನ್ಸ್‌ಗೆ ಅರ್ಜಿ ಹಾಕಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನೂ ಕೂಡಾ ಮೈಸೂರಿಗೆ ಹೋಗಿದ್ದಾಗ ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಷ್ಟ ಏನು ಸ್ವಾಮಿ? ತೊಂದರೆ ಏನು ಇದೆ. ರೆವಿನ್ಯೂ ಸೈಟ್‌ನ್ನು ಕೊಡತಕ್ಕವ್ಯರಲ್ಲಿ ನಿಮಗೆ ತೊಂದರೆ ಏನಿದೆ? ಅವರು ಅರ್ಜಿ ಕೊಟ್ಟರೆ ಯಾವಾಗಲೋ ಎಲ್ಲೋ ಅವೈಲಿಬಿಲಿಟಿ ಇದ್ದಾಗ ಕೊಡುತ್ತೀರಿ. ಈಗಾಗಲೇ ೧೦-೧೨ ವರ್ಷದಿಂದ ಅಲ್ಲಿ ಏನು ಇದ್ದರು ಅವರಿಗೇ ರೆಗ್ಯುಲರೈಸ್ ಮಾಡುವುದಕ್ಕೆ ತೊಂದರೆ ಏನಿದೆ?

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನೆಲ್ಲಾ ತೆಗೆದುಹಾಕಿಬಿಟ್ಟಿದ್ದಾರೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀಮತಿ ಮುಮ್ತಾಜ್ ಅನ್ನಿಸಾ.—ಅವರು ಅಲ್ಲೇ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಲ್ಲೇ ಕೊಡುವುದಕ್ಕೆ ಆಗುವುದಿಲ್ಲ. ಬೇರೆ ಕಡೆಗೆ ಅರ್ಜಿ ಹಾಕಿ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ನಾನೂ ಹೇಳಿದ್ದೇನೆ. ಅವರೂ ಕೂಡಾ ಒಪ್ಪಿಕೊಂಡು ಹೋಗಿದ್ದಾರೆ.

ಕುಡಿಯುವ ನೀರಿನ ಅಭಾವ

೬೯ (೩೪೦) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಸತಿ ಮತ್ತು ಪರ್ಸ್ಸ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ 'ಸುಲೆಭಾವಿ' ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ನೀರಿನ ಅಭಾವ ಪರಿಹರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಇ) ಈ ಊರಿಗೆ ಎಸ್.ಆರ್ ಡಬ್ಲ್ಯೂ.ಎಸ್. ಯೋಜನೆ ಯಾವಾಗ ಮಂಜೂರು ಆಯಿತು ? ಅದು ಈಗ ಯಾವ ಹಂತದಲ್ಲಿ ಇದೆ. ಹಾಗೂ ಮುಗಿಯಲು ಇನ್ನು ಎಷ್ಟು ದಿವಸ ಬೇಕಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಸತಿ ಮತ್ತು ಪರ್ಸ್ಸ ಮಂತ್ರಿಗಳು).—

ಅ) ಹೌದು.

ಆ) ಈ ಗ್ರಾಮದಲ್ಲಿ ನಾಲ್ಕು ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಸಾಧಾರಣವಾಗಿದ್ದು, ಅವುಗಳಿಗೆ ಕೈ ಪಂಪು ಅಳವಡಿಸಿ, ಇವುಗಳ ಮೂಲಕ ನೀರನ್ನು ಒದಗಿಸಲಾಗುತ್ತಿದೆ.

ಇ) ಈ ಊರಿಗೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು (ಎನ್.ಆರ್.ಡಬ್ಲ್ಯೂ.ಎಸ್) ಯೋಜನೆಯ ಅಂದಾಜು ಪಟ್ಟಿಗೆ ೩೧-೩-೮೦ ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರಕಿದ್ದು, ದಿನಾಂಕ ೨೯-೪-೮೦ ರಲ್ಲಿ ತಾಂತ್ರಿಕ ಮಂಜೂರಾತಿ ಕೊಡಲಾಗಿದೆ, ಈ ಯೋಜನೆಯಲ್ಲಿ ಕೊಳವೆ ಬಾವಿಗಳು ವಿಫಲಗೊಂಡಿದ್ದರಿಂದ ಜಲಮೂಲವನ್ನು ಸ್ಥಿರಪಡಿಸಲಾಗಿರುವುದಿಲ್ಲ. ಆದಕಾರಣ ಈ ಯೋಜನೆಯ ಇತರ ಕಾಮಗಾರಿಗಳನ್ನು ಪ್ರಾರಂಭಿಸಲಾಗಿಲ್ಲ.

ಆದುದರಿಂದ ಮಲಪ್ರಭಾ ನದಿಯ ನೀರನ್ನು ಜಲ ಮೂಲವನ್ನಾಗಿ ಪರಿಗಣಿಸಿ, ಸುತಗಟ್ಟಿ ಮತ್ತು ಹಿಟ್ಟಿನಗಿ ಗ್ರಾಮಗಳಿಗೆ ಸಂಯುಕ್ತ ನೀರು ಸರಬರಾಜು ಯೋಜನೆ ಮಾಡಿರುತ್ತದೆ. ಇದರ ಅಂದಾಜು ಪಟ್ಟಿ ತಯಾರುಮಾಡಿ, ಇದು ಮಂಜೂರು ಮಾಡುವ ಹಂತದಲ್ಲಿರುತ್ತದೆ. ಈ ಸಂಯುಕ್ತ ಯೋಜನೆಗೆ ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ರೂ. ೩.೨೦ ಲಕ್ಷಗಳ ಅನುದಾನವಿದ್ದು. ಮುಂದಿನ ವರ್ಷದ ಅಂತ್ಯದೊಳಗೆ ಪೂರ್ಣಗೊಳ್ಳಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಅಧ್ಯಕ್ಷರೇ, ೧೯೮೦ರಲ್ಲಿ ಈ ಸ್ಕೀಮು ಮಂಜೂರಾಗಿದ್ದು ಕಳೆದ ೫ ವರ್ಷಗಳಿಂದ ಈ ಜನರಿಗೆ ನೀರು ಸಿಕ್ಕಿಲ್ಲ, ತಮ್ಮ ಪರದಿಯ ಪ್ರಕಾರ ಅಲ್ಲಿ ೪ ಕೊಳವೆ ಬಾವಿಗಳು ಇದ್ದರೂ ಆವುಗಳಲ್ಲಿ ೨ರಲ್ಲಿ ಮಾತ್ರ ನೀರು ಬರುತ್ತಿದೆ. ಅಲ್ಲಿ ಸೈಕ್ಲೋನ್ ರಿಗ್ ತರಿಸಿ ಬಾವಿ ಕೊರೆಯಬೇಕೆಂದು ಎಷ್ಟೋ ಅರ್ಜಿ ಕೊಟ್ಟಿದ್ದರೂ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಕೇವಲ ೨ ಫರ್ಲಾಂಗ್ ದೂರದಲ್ಲಿ ಮಲಪ್ರಭಾ ಹೊಳೆ ಇದ್ದರೂ ಕೂಡಾ ಹುಬ್ಬಳ್ಳಿ-ಧಾರವಾಡಕ್ಕೆ ೬೦ ಕಿ.ಮೀ. ನೀರು ತೆಗೆದುಕೊಂಡು ಹೋಗಿ ಕೊಡುತ್ತಿದ್ದಾರೆ. ಆದ್ದರಿಂದ ಕೂಡಲೇ ಸೈಕ್ಲೋನ್ ರಿಗ್ ತರಿಸಿ ನೀರನ್ನು ಕೊಡುವ ವ್ಯವಸ್ಥೆಯಾಗಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಪತಿಯವರೆ, ಸೈಕ್ಲೋನ್ ರಿಗ್ಸ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅವನ್ನು ತರಬೇಕಾದರೆ ಅಲ್ಲಿ ಜಿಯೋಫಿಸಿಕಲ್ ಸರ್ವೇ ಮಾಡಿ ಅದರ ಅಗತ್ಯ ಇದ್ದರೆ ಕಳುಹಿಸಲಾಗುತ್ತದೆ. ಈಗಾಗಲೇ ಅಲ್ಲಿಗೆ ನೀರು ಒದಗಿಸುವ ಬಗ್ಗೆ ಯೋಜನೆ ಮಾಡಿದ್ದು ಈ ವರ್ಷ ಮೂರೂವರೆ ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಮಲಪ್ರಭಾದಿಂದ ನೀರು ಕೊಡತಕ್ಕ ಈ ಯೋಜನೆಯನ್ನು ಈ ವರ್ಷದ ಕೊನೆಯೊಳಗೆ ಮುಗಿಸಿಕೊಡುತ್ತೇವೆ.

ಅಧ್ಯಕ್ಷರು.—ಮಲ್ಲಾರಿಗೌಡ ಪಾಟೀಲರೇ, ನಿಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇವೆ.

ಶ್ರೀ ಎಂ. ಎಸ್. ಪಾಟೀಲ್.—ಮುಂದೂಡಲು ಕಾರಣವೇನು ?

ಅಧ್ಯಕ್ಷರು.—ಹಲವಾರು ಕಾರಣಗಳು ಇರುತ್ತವೆ.

ಶ್ರೀ ಎಂ. ಎಸ್, ಪಾಟೀಲ್.—ಎಷ್ಟು ದಿವಸಗಳಲ್ಲಿ ಉತ್ತರವನ್ನು ಕೊಡಿಸುತ್ತೀರಿ ?

ಅಧ್ಯಕ್ಷರು.—ಆದಷ್ಟು ಬೇಗ.

ನೀರಂ ಸರಬರಾಜಂ ಯೋಜನೆಯ ಬದಲಾವಣೆ

೭೧ (೧೫೨) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ಪಕ್ಷೇತರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ನಗರ ನೀರು ಪೂರೈಕೆ ಮಂಡಳಿಯವರು ಬೀಳಗಿ ಗ್ರಾಮಕ್ಕೆಂದು ಸಿದ್ಧಪಡಿಸಿದ ನೀರು ಪೂರೈಕೆ ಯೋಜನೆಯನ್ನು ಜನಾರೋಗ್ಯ ಶಿಲ್ಪಕಾರ್ಯ ವಿಭಾಗಕ್ಕೆ ವರ್ಗಾಯಿಸುವ ಕುರಿತು ಜಿಲ್ಲಾ ಅಭಿವೃದ್ಧಿ ಮಂಡಳಿಯ ನಿರ್ಣಯ ಸ್ವೀಕರಿಸಿಲ್ಲವೇ ?

ಆ) ಹಾಗಿದ್ದಲ್ಲಿ ಯೋಜನೆಯ ಅಂದಾಜು ಪೆಚ್ಚಾವೆಷ್ಟು, ಹಾಗೂ ಕೆಲಸ ಯಾವಾಗ ಪ್ರಾರಂಭವಾಗುತ್ತದೆ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷೇತರ ಮಂತ್ರಿಗಳು).—

ಅ) ಬೀಳಗಿಗೆ ಕುಡಿಯುವ ನೀರಿನ ಪೂರೈಕೆ ಕರ್ನಾಟಕ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿ ಬಿಜಾಪುರ ಇವರ ಅಧೀನದಲ್ಲಿರುತ್ತದೆ. ಆದರೆ, ಬಿಜಾಪುರ ಜಿಲ್ಲಾ ಅಭಿವೃದ್ಧಿ ಮಂಡಳಿಯು